

ಅಮ್ಮನ ತುತ್ತಿಗೆ ಕಾಯುತ್ತಿರುವ ಬಾಯ್ಕಳಕ ಕೊಕ್ಕರೆಯ ಮರಿಗಳು



ಮಳ್ಳಿ ಮಳ್ಳಿ 'ಮಿಂಚುಳ್ಳಿ'

ಜೋತು ಬಿದ್ದಿರುವ ನರಿ ಮುಖದ ಬಾವಲಿಗಳನ್ನು 'ಹಾರುವ ನರಿ' ಎಂದು ಕರೆಯಲಾಗುತ್ತದೆ' ಎನ್ನುತ್ತಾರೆ ಆರ್‌ಎಫ್‌ಒ ಸೈಯದ್ ನದೀಂ.

## ಪಕ್ಷಿಗಳ ದರ್ಶನ ಮಾಡಿಸುವ ನಾವಿಕರು

'ಇಲ್ಲಿರುವ 12 ಬೋಟ್‌ಮನ್‌ಗಳು ಕೇವಲ ದೋಣಿ ನಡೆಸುವ ನಾವಿಕರಲ್ಲ. ಪಕ್ಷಿ ಮತ್ತು ಪರಿಸರ ವಿಸ್ಮಯಗಳ ಬಗ್ಗೆ ಮನಮುಟ್ಟುವಂತೆ ಹೇಳುವ ಗೈಡ್‌ಗಳಾಗಿದ್ದಾರೆ. ಇವರೆಲ್ಲರೂ ತರಬೇತಿ ಪಡೆದಿದ್ದು, ಪ್ರವಾಸಿಗರನ್ನು ನಗುಮೊಗದಿಂದ ಸ್ವಾಗತಿಸುತ್ತಾರೆ. ಪಕ್ಷಿಗಳ ದರ್ಶನ ಮಾಡಿಸುತ್ತಾ ರಂಗನತಿಟ್ಟಿನ ಸಮಗ್ರ ಮಾಹಿತಿ ನೀಡುತ್ತಾರೆ. ಇಲ್ಲಿ ಸ್ಪೀಡ್ ಬೋಟ್, ಮೋಟಾರ್ ಬೋಟ್ ಬಳಸಿದರೆ ಪಕ್ಷಿಗಳ ಚಲನವಲನಕ್ಕೆ ಧಕ್ಕೆಯಾಗುತ್ತದೆ ಎಂಬ ಕಾಳಜಿಯಿಂದ ಹರಿಗೋಲಿನಿಂದ ದೋಣಿ ಹುಟ್ಟು ಹಾಕುವ ವ್ಯವಸ್ಥೆ ಕಲ್ಪಿಸಲಾಗಿದೆ' ಎನ್ನುತ್ತಾರೆ ಡಿಆರ್‌ಎಫ್‌ಒ ರವಿ.

## ಮಹಾರಾಜ ವ್ಯೂ ಪಾಯಿಂಟ್

ರಂಗನತಿಟ್ಟು ಪಕ್ಷಿಧಾಮದಲ್ಲಿರುವ 'ಮಹಾರಾಜ ವ್ಯೂ ಪಾಯಿಂಟ್' ಕಾವೇರಿ ನದಿಯ ಸುಂದರ ನೋಟ ಮತ್ತು ದ್ವೀಪದಲ್ಲಿನ ಪಕ್ಷಿಗಳನ್ನು ವೀಕ್ಷಿಸಲು ಅತ್ಯುತ್ತಮ ಸ್ಥಳ. ಜಯಚಾಮರಾಜ ಒಡೆಯರ್ ಕಾಲದಲ್ಲಿ ನಿರ್ಮಾಣವಾಗಿರುವ ಈ ವೀಕ್ಷಣಾ ಗೋಪುರ 'ಇಂಡೊ ಸಾರ್ಸೆನಿಕ್' ಶೈಲಿಯಲ್ಲಿದೆ. ಇದು ಪಕ್ಷಿಧಾಮದ ಶಾಂತಿಯುತ ಪರಿಸರದಲ್ಲಿ ಪ್ರಕೃತಿ ಪ್ರೇಮಿಗಳಿಗೆ ಮತ್ತು ಛಾಯಾಗ್ರಾಹಕರಿಗೆ ನೆಚ್ಚಿನ ತಾಣವಾಗಿದೆ. ಇಲ್ಲಿ ಬೋಟಿಂಗ್ ಜೊತೆಗೆ ಪಕ್ಷಿಗಳನ್ನು ಹತ್ತಿರದಿಂದ ನೋಡಬಹುದು.

### ಕವಲುತೋಕೆಗಳ ಆಕರ್ಷಣೆ

ಕವಲುತೋಕೆಗಳು ಕೀಟಾಹಾರಿ ಪಕ್ಷಿಗಳಾಗಿವೆ. ಇವುಗಳನ್ನು ಕನ್ನಡದಲ್ಲಿ ಅಂಬರಗುಬ್ಬಿ ಅಥವಾ ಬಾನಾಡಿ ಎಂದೂ ಕರೆಯಲಾಗುತ್ತದೆ. ಗುಬ್ಬಚ್ಚಿ ಗಾತ್ರದ ಇವುಗಳ ಬಾಲ ಕವಲೊಡೆದಂತಿರುತ್ತದೆ. ಹೀಗಾಗಿಯೇ ಕವಲುತೋಕೆ ಎಂಬ ಹೆಸರು ಬಂದಿದೆ. ಕಾವೇರಿ ನದಿ ದಂಡೆಯ ರೈತರ ಹೊಲಗಳಿಗೆ ಹೋಗಿ ಕೆಸೆ ಮಣ್ಣು ತಂದು, ಎಂಜಲಿನಿಂದ ಮಿಶ್ರಣ ಮಾಡಿ ಗೂಡು ಕಟ್ಟುವುದನ್ನು ನೋಡುವುದೇ ಒಂದು ವಿಸ್ಮಯ. ಪಕ್ಷಿಗಳ ಪುಕ್ಕಗಳನ್ನು ಆಯ್ದು ತಂದು ಮೆತ್ತನೆ ಹಾಸಿಗೆ ಮಾಡಿಕೊಂಡು ಮೊಟ್ಟೆ ಇಡುತ್ತವೆ. ನೊಣ, ಸೊಳ್ಳೆ, ಇರುವೆ, ಜೀರುಂಡೆ, ಸಣ್ಣ ಪತಂಗಗಳು ಇವುಗಳ ಪ್ರಮುಖ ಆಹಾರ.

## ಸಂರಕ್ಷಣೆಯ ಸವಾಲು

'ಭಾರತದ ಪಕ್ಷಿಧಾಮಗಳ ಭೂಪಟದಲ್ಲಿ ರಂಗನತಿಟ್ಟು ಪಕ್ಷಿಧಾಮ ರಾರಾಜಿಸುತ್ತಲೇ ಇರಬೇಕಾದರೆ ನಿಮ್ಮ ಹಾರೈಕೆ, ಸಂರಕ್ಷಣೆ ಹಾಗೂ ನಿರ್ವಹಣೆ ಎಲ್ಲಾ ಬೇಕು. ನದಿಯ ತೀರದ ಸವಕಳಿ, ಅಕ್ರಮ ಮೀನುಗಾರಿಕೆ, ಅಕ್ರಮ ಮರಳು ಮಾರಾಟದ ದಂಧೆ, ಮರಗಳ್ಳತನ, ದನ ಕರುಗಳನ್ನು ಅಕ್ರಮವಾಗಿ ಪಕ್ಷಿಧಾಮದಲ್ಲಿ ಮೇಯಿಸುವುದು ಇವು ನಿತ್ಯ ಎದುರಿಸಬೇಕಾದ ಸವಾಲುಗಳು' ಎನ್ನುತ್ತಾರೆ ಇಲ್ಲಿನ ಅರಣ್ಯ ಇಲಾಖೆ ಸಿಬ್ಬಂದಿ.

'ಈ ಸವಾಲುಗಳನ್ನು ಎದುರಿಸುತ್ತಾ, ಅದರ ಜತೆಗೆ ಸಂಶೋಧನೆ, ಸಂರಕ್ಷಣೆ, ಸಂಯೋಜನೆ, ಸಾರ್ವಜನಿಕರಿಗೆ ಸೌಲಭ್ಯ ಒದಗಿಸುವುದು ಇತ್ಯಾದಿ ಕಾರ್ಯಗಳನ್ನು ನಿರ್ವಹಿಸಬೇಕು' ಎಂಬುದು ಅರಣ್ಯ ಅಧಿಕಾರಿಗಳ ಉವಾಚ.

ರಂಗನತಿಟ್ಟು ಪಕ್ಷಿಧಾಮಕ್ಕೆ ವಾರದ ಏಳೂ ದಿನ ಬೆಳಿಗ್ಗೆ 6ರಿಂದ ಸಂಜೆ 5.30ರವರೆಗೆ ಪ್ರವೇಶಾವಕಾಶವಿದೆ. ಫೆಬ್ರುವರಿ–ಮಾರ್ಚ್‌ನಲ್ಲಿ ನಡೆಸಿದ ಪಕ್ಷಿ ಗಣತಿಯಲ್ಲಿ ಅಂದಾಜು 11,780 ಹಕ್ಕಿಗಳನ್ನು ಗುರುತಿಸಲಾಗಿದೆ. ಸೆಲ್ಫಿ ಪಾಯಿಂಟ್, ರಾಕ್ ಗಾರ್ಡನ್, ತೂಗುಸೇತುವೆ, ಗಾಜಿನ ಸೇತುವೆ, ಮರಗಳ ತೋಪು, ಮಕ್ಕಳ ಆಟದ ಮೈದಾನ, ಸ್ಮರಣಿಕೆ ವಸ್ತುಗಳ ಅಂಗಡಿ, ವೀಕ್ಷಣಾ ಗೋಪುರ ರಂಗನತಿಟ್ಟಿನ ಇತರ ಆಕರ್ಷಣೆಗಳು. ಉಪಾಹಾರ ಕೇಂದ್ರ, ಕುಡಿಯುವ ನೀರು, ಶೌಚಾಲಯ, ವಾಹನ ನಿಲುಗಡೆ ಸ್ಥಳ ಸೇರಿದಂತೆ ಮೂಲಸೌಕರ್ಯವನ್ನು ಒಳಗೊಂಡಿದೆ. ಇದು 'ಪ್ಲಾಸ್ಟಿಕ್ ಮುಕ್ತ ವಲಯ' ಎಂದು ಘೋಷಿಸಲಾಗಿದೆ.

ಪಕ್ಷಿಧಾಮದಲ್ಲಿ ಪ್ರವಾಸಿಗರ ದೋಣಿ ವಿಹಾರ

